ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಾಂಯಿಷ್ ಆದ್ದು [ನಂ. 36.

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ|| 10, ಸ್ ಈ 1903.

IIನೇ ಭಾಗ.

ಇಂಡ್ಯಗವರ್ಮಮಂಟ್, ರೆಸಿಡೆಂಟರು, ಚೀಫ್ ಜಡ್ಜ್ರೀರು ವಗ್ಗೆರೇರಿಂದ ಕೊಡೋಪ್ಪಾದ ಇಸ್ತಿಹಾರ್ನಾಮೆಗಳು.

ಇನಾಂ ಇಲಾಖೆ.

ಇಸ್ತಿಹಾರ್ನಾಮೆ.

ನಂಬರು—1. ತಾರೀಖು 19ನೆ ಆಗಸ್ಟ್ 1903ನೆ ಇಸವಿ.

ಇನಾಂದಾರ್ರುಗಳಿಗೆ ಇದರಿಂದ ತಿಳಿಯಪಡಿಸುವದೇನಂದರೆ:—ಬೆಂಗಳೂರು ಡಿಸ್ಟ್ರಿಕ್ಟು ದೇವನಹಳ್ಳಿ ತಾಲ್ಲೂಕಿನಲ್ಲಿರತಕ್ಕ ಬಿಲ್ಲರೆ ಇನಾಂಗಳ ಬಾಬತು ಫೈನಲ್ ಟೈಟಲ್‌ಡೀಡ್ ಯಾನೆ ಖಾಯಂ ಪಟ್ಟೆಗಳು (1479) ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯೂಟಿ ಕಮಿಷ್ನರ್ ಸಾಹೇಬರವರ ಬಳಿಗೆ ಬಟವಾಡೆ ಬಗ್ಗೆ ಕಳುಹಿಸಲ್ಪಟ್ಟಿವೆ.

2. ಸದರಿ ತಾಲ್ಲೂಕಿನ ಅಮಲ್ದಾರ್ರಿಂದ ಪ್ರತ್ಯೇಕ, ಪ್ರತ್ಯೇಕ, ನೋಟೀಸುಗಳು ಬಂದಮೇಲೆ ಅವುಗಳನ್ನು (ಪಟ್ಟೆಗಳನ್ನು) ತೆಗದುಕೊಳ್ಳುವ ಬಗ್ಗೆ ಸದರಿ ಇನಾಂದಾರ್ರುಗಳು ಏರ್ಪಡಿಸಿಕೊಂಡು ಹಾಜರಾಗತಕ್ಕದ್ದು. ಸದರಿ ತಾಲ್ಲೂಕಿನ ಅಮಲ್ದಾರ್ರು ಅಂಥಾ ನೋಟೀಸುಗಳನ್ನು ದೇರ ಮಾಡದೆ ಕೊಡತಕ್ಕದ್ದೆಂದು ನಿಯಮಿಸಲ್ಪಟ್ಟು ಇರುತ್ತಾರೆ.

3. ಸದರಿ ಬಿಲ್ಲರೆ ಇನಾಂಗಳ ಬಗ್ಗೆ ಈ ಆಫೀಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದು ಮಾಡಲ್ಪಟ್ಟು ಇರುತ್ತೆಂದು ಇದರ ದೆಶೆಯಿಂದ ಪ್ರಕಟಿಸಲ್ಪಟ್ಟು ಇರುತ್ತೆ.

ಜೆ. ಪಿ. ಗ್ರಾಂಟ್,
ಸೂಪರಿಂಟಿಂಡೆಂಟ್ ಆಫ್ ಇನಾಂ ಸೆಟಲ್‌ಮೆಂಟ್ಸ್.